ಏಕೆಂದರೆ, ನಮಗೆ ಬಂದಿರತಕ್ಕ ಅಂಕಿಅಂಶಗಳ ಪ್ರಕಾರ ನಮಗೆ 100 ಕೋಟಿಗಿಂತಲೂ ಹೆಚ್ಚಿಗೆ ಇರತಕ್ಕ ಆದಾಯದಲ್ಲಿ ಕೇವಲ 16 ಲಕ್ಷ ರೂಪಾಯಿ ಮಾತ್ರ ಈ ಬಾಬಿನಿಂದ ಬರುತ್ತಿದೆ. ಇದಕ್ಕಾಗಿ ಬೆಂಗಳೂರು ನಗರದ ಸೌಂದರ್ಯವನ್ನು, ಬೆಂಗಳೂರು ನಾಗರೀಕರ ರಕ್ಷಣೆಯನ್ನು ನಾವು ಕೈ ಬಿಡುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಪೋರ್ಡಿಂಗ್ಸ್ ಲೀಸ್ ಅಮೌಂಟ್ ನಮಗೆ ಬೇಡ, ಜಾಹಿರಾತಿನ ಹಣ ಕೂಡ ನಮಗೆ ಬೇಡ. ಇದನ್ನೆಲ್ಲಾ ಬಿಟ್ಟರೆ ಬೆಂಗಳೂರು ನಗರದಾದ್ಯಂತ ಸಂಚಾರದಲ್ಲಿ ಶಾಂತಿಯುತ ವಾತಾವರಣ ಉಂಟಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ಈಗಾಗಲೇ ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಎಲ್ಲೆಲ್ಲಿ ಈ ರೀತಿ ಟ್ರಾಫಿಕ್ ಪೆಡೆಸ್ಟ್ರಿಯನ್ ಮತ್ತು ಟ್ರಾಫಿಕ್‌ಗೆ ಅಡಚಣೆ ಬರುತ್ತದೆ ಅಂಥ ಕಡೆ ಟ್ರಾಫಿಕ್ ಪೋಲೀಸರನ್ನು ಕೇಳಿ ಅವರಿಂದ ಅನುಮತಿಯನ್ನು ತೆಗೆದುಕೊಂಡೇ ಇನ್ನು ಮುಂದೆ ಹೋರ್ಡಿಂಗ್ಸ್ ಹಾಕಿಸುತ್ತೇವೆ. ಇನ್ನು ಸೌಂದರ್ಯದ ವಿಚಾರದಲ್ಲಿ ಕೂಡ ಅರ್ಬನ್ ಆರ್ಟ್ಸ್ ಕಮೀಷನರ್‌ರವರ ಅಭಿಪ್ರಾಯವನ್ನು ತೆಗೆದುಕೊಂಡು ಹೋರ್ಡಿಂಗ್ಸ್‌ನ್ನು ಹಾಕಿಕೊಳ್ಳುವುದಕ್ಕೆ ಅನುಮತಿ ಕೊಡುತ್ತೇವೆ.

ಕುಂದಗೋಳ ನಗರಕ್ಕೆ ಕುಡಿಯುವ ನೀರಿನ ಸರಬರಾಜು.

108 (110) ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಕುಂದಗೋಳ ನಗರದ ಜನತೆಗೆ ಕುಡಿಯುವ ನೀರಿನ ಸರಬರಾಜನ್ನು ಎಷ್ಟು ದಿವಸಗಳಲ್ಲಿ ಒದಗಿಸಲಾಗುವುದು?
2. ಈ ನೀರು ಸರಬರಾಜು ಕೆಲಸ ಯಾವ ಹಂತದಲ್ಲಿ ಇದೆ?
3. ಅದನ್ನು ಬೇಗ ಮುಗಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

1. ಮಾರ್ಚ್ 1992 ಅಂತ್ಯದೊಳಗೆ
2. ಎಲ್ಲಾ ಕಾಮಗಾರಿಗಳು ಮುಗಿಯುವ ಹಂತದಲ್ಲಿವೆ.
3. ಹೌದು - ಮಾರ್ಚ್ 1992ಕ್ಕೆ

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್:- ಸ್ವಾಮಿ, ಕುಂದಗೋಳ ನಗರವು ಕುಡಿಯುವ ನೀರಿನ ಸಮಸ್ಯೆಯನ್ನು ಬಹಳ ದಿವಸದಿಂದ ಎದುರಿಸುತ್ತಿದೆ. ಆದರೆ ತಮ್ಮ ಉತ್ತರದಲ್ಲಿ ಮಾರ್ಚಿ ಅಂತ್ಯದೊಳಗೆ ಈ ಕೆಲಸವನ್ನು ಮಾಡಿ ಕೊಡುತ್ತೇವೆಂದು ಹೇಳಿದ್ದೀರಿ. ಬಹುಶಃ ಅಷ್ಟರೊಳಗೆ ಈ ಕೆಲಸ ಮುಗಿಯುವುದಿಲ್ಲ. ಆದುದರಿಂದ ಪುನಃ ಅವರನ್ನು ಕರೆಸಿ ಮಾರ್ಚಿಯೊಳಗೆ ಕುಡಿಯುವ ನೀರನ್ನು ಸರಬರಾಜು ಮಾಡುತ್ತೇವೆಂದು ಹೇಳುತ್ತಿದ್ದೀರಿ. ತಾವು ಮಾರ್ಚಿ ಅಂತ್ಯದೊಳಗೆ ಕುಡಿಯುವ ನೀರನ್ನೊದಗಿಸಿದರೆ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:- ನಿನ್ನೆ ತಾನೆ ನಮ್ಮ ಛೇರ್ಮನ್ ಮತ್ತು ಎಂ.ಡಿ. ಯವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಈ ತಿಂಗಳ ಅಂತ್ಯದೊಳಗೆ ಇದನ್ನು ಪ್ರಾರಂಭ ಮಾಡುತ್ತೇವೆ.

ರಾಜ್ಯದಲ್ಲಿರುವ ರಾಸಾಯನಿಕ ಘಟಕಗಳ ಸಂಖ್ಯೆ

109 (791) ಶ್ರೀ ಎಸ್. ಜಯಣ್ಣ (ಚಳ್ಳಕೆರೆ):- ಮಾನ್ಯ ಗೃಹ ಹಾಗೂ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರಾಸಾಯನಿಕ ಘಟಕಗಳು ಎಷ್ಟಿವೆ?

ಆ) ಇವುಗಳಿಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ಒಂದೊಂದು ಘಟಕಕ್ಕೆ ಸರ್ಕಾರ ಯಾವ ರೀತಿ ಮತ್ತು ಎಷ್ಟೆಷ್ಟು ನೀಡುತ್ತಿವೆ?

ಇ) ಇವುಗಳಿಂದ ತಯಾರಾದ ವಸ್ತುಗಳು ಎಲ್ಲೆಲ್ಲಿ ಮಾರಾಟವಾಗುತ್ತಿವೆ?

ಶ್ರೀ ಧರ್ಮಸಿಂಗ್ (ಗೃಹ ಹಾಗೂ ಅಬಕಾರಿ ಸಚಿವರು.):-

ಅ) ರೆಕ್ಟಿಫೈಡ್ ಸ್ಪಿರಿಟ್ ಆಧಾರಿತ ರಾಸಾಯನಿಕ ಘಟಕಗಳು ರಾಜ್ಯದಲ್ಲಿ (67) ಮತ್ತು ಡಿನೇಚರ್ಡ್ ಸ್ಪಿರಿಟ್ ಆಧಾರಿತ ಘಟಕಗಳು (10) ಇರುತ್ತವೆ.

ಆ) ರಾಸಾಯನಿಕ ಘಟಕಗಳ ಲೈಸನ್ಸ್ ಕೋಟಾ ಆಧಾರದ ಮೇಲೆ ಹಾಗೂ ರಾಜ್ಯದಲ್ಲಿ ಸ್ಪಿರಿಟ್ ದೊರೆಯುವ ಆಧಾರದ ಮೇಲೆ ಸ್ಪಿರಿಟ್ ಹಂಚಿಲಾಗಿದೆ.

ಇ) ಮೇಲ್ಕಂಡ ರಾಸಾಯನಿಕ ಘಟಕಗಳಲ್ಲಿ ತಯಾರಾದ ವಸ್ತುಗಳು ಕರ್ನಾಟಕ ರಾಜ್ಯ ಹಾಗೂ ಇತರೇ ರಾಜ್ಯಗಳಲ್ಲಿ ಮಾರಾಟವಾಗುತ್ತಿರುತ್ತದೆ.

ಶ್ರೀ ಎಸ್. ಜಯಣ್ಣ:- ನಾನು ಘಟಕಗಳು ಯಾವ ಯಾವ ಊರುಗಳಲ್ಲಿವೆ, ಎಲ್ಲೆಲ್ಲಿ ಕೊಟ್ಟಿದ್ದೀರಿ ಎಂದು ಪ್ರಶ್ನೆ ಕೇಳಿದ್ದೆ. ಆದರೆ ಮಾನ್ಯ ಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಒಟ್ಟು 67 ಘಟಕಗಳು ಎಂದು ಹೇಳಿದ್ದಾರೆ. ದಯವಿಟ್ಟು ಅದರ ವಿವರವನ್ನು ಕಳುಹಿಸಿಕೊಡಬೇಕು ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್:- ರಾಜ್ಯದಲ್ಲಿ ಎಷ್ಟು ರಾಸಾಯನಿಕ ಘಟಕಗಳನ್ನು ಕೊಟ್ಟಿದ್ದೇವೆಂಬ ವಿವರಗಳನ್ನು ಕೊಟ್ಟಿದ್ದೇನೆ. ಆದರೆ ಯಾರ್ಯಾರಿಗೆ ಎಷ್ಟೆಷ್ಟು, ಅವರ ಹೆಸರುಗಳ ಪಟ್ಟಿ ಪ್ರತ್ಯೇಕವಾಗಿ ಬೇಕಾದರೆ ಮತ್ತೊಂದು ಪ್ರಶ್ನೆಯನ್ನು ಕೇಳಿದರೆ ಕೊಡುತ್ತೇನೆ.

ಅಧ್ಯಕ್ಷರು:- ಜಯಣ್ಣನವರೇ, ನೀವು ಈ ಪ್ರಶ್ನೆಯ ಜೊತೆಯಲ್ಲಿಯೇ ಇನ್ನೊಂದು ಪ್ರಶ್ನೆಯನ್ನು ಕೇಳಬಹುದಿತ್ತು. ಯಾರ್ಯಾರಿಗೆ ಕೊಟ್ಟಿದ್ದೀರೆಂದು ಕೇಳಿದ್ದಿದ್ದರೆ ಅವರು ಕಲೆಕ್ಟ್ ಮಾಡಿ ಉತ್ತರ ಕೊಡುತ್ತಿದ್ದರು.

ಶ್ರೀ ಎನ್. ಜಯಣ್ಣ:- ಅವರು ಉತ್ತರವನ್ನು ಕಳುಹಿಸಿಕೊಡುತ್ತೇನೆಂದು ಹೇಳಿದ್ದಾರೆ. ಕಳುಹಿಸಿಕೊಡಲಿ, ಸಂತೋಷ. ರಾಸಾಯನಿಕ ವಸ್ತುಗಳು ಎಲ್ಲೆಲ್ಲಿ ಮಾರಲ್ಪಡುತ್ತಿವೆ ಎಂಬ ವಿವರಗಳನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಣ್ಣನವರಿಗೆ ಈ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಇದೆ. ಅಂದರೆ ತಯಾರಾದ ವಸ್ತುಗಳನ್ನು ಕೆಮಿಕಲ್ ನೀಡ್ಸ್‌ಗೆ ಕಳುಹಿಸಿಕೊಡುತ್ತೇವೆ. ಅವರೂ ಕೂಡ ಎಲ್ಲೆಲ್ಲಿ ತಯಾರಿಸಿ ಕಳುಹಿಸಿಕೊಡುತ್ತೇವೆಂಬ ಬಗ್ಗೆ ಪಟ್ಟಿಯನ್ನು ಕೂಡ ಬೇಕೆಂದರೆ ಈ ಸದನದಲ್ಲಿ ಕೊಡುತ್ತೇವೆ.

ಶ್ರೀ ಹೆಚ್. ವಿಶ್ವನಾಥಯ್ಯ:- ರೆಕ್ಟಿಫೈಡ್ ಸ್ಪಿರಿಟ್ ಆಧಾರಿತ ರಾಸಾಯನಿಕ ಘಟಕಗಳು ರಾಜ್ಯದಲ್ಲಿ 67 ಇವೆ ಎಂದು ಹೇಳಿದ್ದೀರಿ. ಈ ಘಟಕಗಳಲ್ಲಿ ಎಷ್ಟು ಘಟಕಗಳು ಈಗಾಗಲೇ ರೆಕ್ಟಿಫೈಡ್ ಸ್ಪಿರಿಟ್‌ನ್ನು ಉಪಯೋಗ ಮಾಡಿಕೊಳ್ಳುತ್ತಿರಲಿಲ್ಲ ಎಂದು ನೀವು ಸ್ಪಿರಿಟ್‌ನ್ನು ಸರಬರಾಜು ಮಾಡುವುದನ್ನು ನಿಲ್ಲಿಸಿದ್ದೀರಿ?

ಶ್ರೀ ಧರ್ಮಸಿಂಗ್:- ಕೆಮಿಕಲ್ ಯೂನಿಟ್ಸ್‌ಗೆ ಅಲಾಟ್ ಮಾಡತಕ್ಕದ್ದು ಪ್ರಾಜೆಕ್ಟ್ ರಿಪೋರ್ಟ್, ಡಿ.ಪಿ.ಆರ್‌ವರ ಮತ್ತು ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯವರ ರೆಕಮೆಂಡೇಷನ್ ಬೇಸಿಸ್ ಮೇಲೆ. ಈ ರೀತಿ ಕೊಟ್ಟ ಮೇಲೆ ಎಲ್ಲೆಲ್ಲಿ, ಅವರು ಸರಿಯಾಗಿ ಕೆಲಸಮಾಡುತ್ತಿಲ್ಲ, ಪ್ರೊಡಕ್ಷನ್ ಮಾಡದೆ ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆ ಅಂಥವರಿಗೆ ನಾವು ಸಪ್ಲೈ ಮಾಡುವುದನ್ನು ನಿಲ್ಲಿಸಿದ್ದೇವೆ

ಶ್ರೀ ಹೆಚ್. ವಿಶ್ವನಾಥಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾನು ಕೇಳಿದಂಥ ಪ್ರಶ್ನೆಗೆ ಸರಿಯಾದ ರೀತಿಯಲ್ಲಿ ಭಾವಿಸಿಲ್ಲವೆಂದು ನಾನು ಭಾವಿಸುತ್ತೇನೆ. ಕಾರಣವೇನೆಂದರೆ, ಅವರು 67 ರೆಕ್ಟಿಫೈಡ್ ಸ್ಪಿರಿಟ್ ಆಧಾರದ ರಾಸಾಯನಿಕ ಘಟಕಗಳು ರಾಜ್ಯದಲ್ಲಿವೆ ಎಂದು ಹೇಳಿದರು ಮತ್ತು ಅವಕ್ಕೆ ಸ್ಪಿರಿಟ್ ಕೊಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಕೇಳುತ್ತಿದ್ದೇನು, ಈ ಹಿಂದೆ ಈ ಘಟಕಗಳು ಸರಿಯಾದ ರೀತಿಯಲ್ಲಿ ಕೆಲಸ

ಮಾಡುತ್ತಿರಲಿಲ್ಲ, ಅದಕ್ಕೋಸ್ಕರವಾಗಿ ರೆಕ್ಟಿಫೈಡ್ ಸ್ಪಿರಿಟ್ ಕೊಡಬಾರದೆಂದು ನಿರ್ಧಾರವಾಯಿತು. ಈ 67 ಘಟಕಗಳಲ್ಲಿ ಅಂಥವುಗಳು ಏನಾದರೂ ಪುನಃ ಸೇರಿವೆಯೇ ಎಂದು ಕೇಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೇ, ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಹಾಕಬೇಕು. ಆದರೂ ಕೂಡ ಯಾವ ಯಾವ ಘಟಗಗಳಿಗೆ ಎಷ್ಟಷ್ಟು ರೆಕ್ಟಿಫೈಡ್ ಸ್ಪಿರಿಟ್ ನಾವು ಕೊಡುತ್ತಿದ್ದೇವೆ, ಅವುಗಳಲ್ಲಿ ಎಲ್ಲೆಲ್ಲಿ ತಯಾರು ಮಾಡುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಾಗ ಎನ್‌ಫೋರ್ಸ್‌ಮೆಂಟ್ ಸೆಲ್ ಅದಕ್ಕಾಗಿಯೇ ಇದೆ, ಅವರು ಹೋಗುತ್ತಾರೆ ತನಿಖೆ ಮಾಡುತ್ತಾರೆ. ಆದರೆ ತಾವು ಪ್ರತ್ಯೇಕವಾಗಿ ಎಷ್ಟು ಘಟಕಗಳು ಎಂದು ಕೇಳಿರುವುದರಿಂದ 67 ಘಟಕಗಳಿಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ನಾವು ಏನು ಕೊಡುತ್ತಿದ್ದೇವೆ ಅವು ಸರಿಯಾಗಿ ಮಾಡುತ್ತಿದೆಯೇ ಅಥವಾ ಅದಕ್ಕೆ ನಿಲ್ಲಿಸಿದ್ದೀರಾ ಎಂದು ಕೇಳುತ್ತಿದ್ದೀರಿ ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ವಿಶ್ವಾಂತಯ್ಯ:- ತಾವು ಈಗ ಏನು 67 ರೆಕ್ಟಿಫೈಡ್ ಸ್ಪಿರಿಟ್ ಘಟಕಗಳಿಗೆ ಕೊಡುತ್ತಿದ್ದೀರಿ, ಆ ಪೈಕಿ ಈ ಹಿಂದೆ ಸರಿಯಾಗಿ ಉಪಯೋಗಿಸಿಲ್ಲವೆಂದು ವಜಾಮಾಡಲ್ಪಟ್ಟ ಘಟಕಗಳು ಸೇರಿದೆಯೇ?

ಅಧ್ಯಕ್ಷರು:- ರಾಜ್ಯದಲ್ಲಿ ರಾಸಾಯನಿಕ ಘಟಕಗಳು ಎಷ್ಟಿವೆ? ಇವುಗಳಿಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ಒಂದೊಂದು ಘಟಕಕ್ಕೆ ಸರ್ಕಾರ ಯಾವ ರೀತಿ ಮತ್ತು ಎಷ್ಟೆಷ್ಟು ನೀಡುತ್ತಿದೆ? ಇವುಗಳಿಂದ ತಯಾರಾದ ವಸ್ತುಗಳು ಎಲ್ಲೆಲ್ಲಿ ಮಾರಾಟವಾಗುತ್ತಿವೆ ಎಂದು ಮೂರು ಪ್ರಶ್ನೆಗಳನ್ನು ಕೇಳಿದ್ದೀರಿ. ಈ ಪ್ರಶ್ನೆಯ ಜೊತೆಯಲ್ಲಿ ಈ ರೆಕ್ಟಿಫೈಡ್ ಸ್ಪಿರಿಟ್ ಮಿಸ್‌ಯೂಸ್ ಮಾಡಿದರು ಅಥವಾ ಸರಿಯಾದ ರೀತಿಯಲ್ಲಿ ಉಪಯೋಗಿಸಿಲ್ಲವೆಂದು ಸೇರಿಸಿಬಿಟ್ಟಿದ್ದರೆ ನಿಮ್ಮ ಪ್ರಶ್ನೆಗೆ ಆಧಾರವಾಗುತ್ತಿತ್ತು.

ಶ್ರೀ ಹೆಚ್. ವಿಶ್ವಾಂತಯ್ಯ:- ಎರಡನೇ ಪ್ರಶ್ನೆಯಲ್ಲಿ, ಇವುಗಳಿಗೆ ರೆಕ್ಟಿಫೈಡ್ ಸ್ಪಿರಿಟ್‌ನ್ನು ಒಂದೊಂದು ಘಟಕಕ್ಕೆ ಸರ್ಕಾರ ಯಾವ ರೀತಿ ಮತ್ತು ಎಷ್ಟೆಷ್ಟು ನೀಡುತ್ತಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಅದಕ್ಕೆ ಪೂರಕವಾಗಿ ಮತ್ತೊಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗ ತಾವು 67 ಘಟಕಗಳಿಗೆ ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತೇವೆಂದರೆ, ಯಾವ ರೀತಿ ಕೊಡುತ್ತಿದ್ದೀರಿ? ಒಂದು ಸಾರಿ ಸರ್ಕಾರ ಕೊಡಬಾರದೆಂದು ತೀರ್ಮಾನಮಾಡಿ ಯಾರು ವಜಾ ಮಾಡಲ್ಪಟ್ಟಿದ್ದಾರೆ ಅಂಥವರು ಯಾರಾದರೂ ಈ ಪಟ್ಟಿಯಲ್ಲಿ ಸೇರಿದ್ದಾರೆಯೇ?

MR. SPEAKER:– He needs notice to answer this question.

ಶ್ರೀ ಧರ್ಮಸಿಂಗ್:- ಅದನ್ನು ವೆರಿಫೈ ಮಾಡುತ್ತೇನೆ.

ರಾಜ್ಯದಲ್ಲಿನ ಭಯೋತ್ಪಾದಕ ಹಾವಳಿಯನ್ನು ಎದುರಿಸುವುದು

110(566) ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್.ಟಿ.ಟಿ.ಇ. ಹಾವಳಿ, ಭಯೋತ್ಪಾದಕರ ಹಾವಳಿ ಹಾಗೂ ವಿಧ್ವಂಸಕ ಶಕ್ತಿಗಳನ್ನು ಎದುರಿಸಲು ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಮೇಲ್ಕಂಡವರ ಹಾವಳಿಯಿಂದ ಸಾರ್ವಜನಿಕ ಪ್ರಾಣ ಆಸ್ತಿ ನಷ್ಟಕ್ಕೆ ಸರ್ಕಾರ ಕಳೆದ ಎರಡು ವರ್ಷಗಳಿಂದ ಕೊಟ್ಟಿರುವ ಪರಿಹಾರ ಎಷ್ಟು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು.):-

ಅ) ರಾಜ್ಯದಲ್ಲಿ ಎಲ್.ಟಿ.ಟಿ.ಇ. ಗಳ ಬಗ್ಗೆ ನಿಗಾ ಇಟ್ಟಿರುವುದರ ಜೊತೆಗೆ ನೀರಾವರಿ ಅಣೆಕಟ್ಟುಗಳಿಗೆ ಹಾಗೂ ಪ್ರಮುಖ ವ್ಯಕ್ತಿಗಳಿಗೆ ಸೂಕ್ತ ರಕ್ಷಣೆಯನ್ನು ಒದಗಿಸಿದ್ದು, ಎಲ್.ಟಿ.ಟಿ.ಇ. ಗಳ ಚಟುವಟಿಕೆಯ ಬಗ್ಗೆ ಮಾಹಿತಿಯನ್ನು ಒದಗಿಸಲು ಐಜಿಪಿ ರಾಜ್ಯ ಗುಪ್ತವಾರ್ತೆಯವರ ಕಚೇರಿಯಲ್ಲಿ ಒಂದು ವಿಶೇಷ ಶೆಲ್ಲನ್ನು ಪ್ರಾರಂಭಿಸಲಾಗಿರುತ್ತದೆ. ಐಜಿಪಿ, ಕೆ.ಎಸ್.ಆರ್.ಪಿ. ಯವರ ನೇತೃತ್ವದಲ್ಲಿ ಮೂರು ಪ್ಲಾಟೂನ್‌ಗಳ ಒಂದು ವಿಶೇಷ ದಳವನ್ನು (ಸ್ಪೆಷಲ್ ಟಾಸ್ಕ್ ಫೋರ್ಸ್) ಎಲ್.ಟಿ.ಟಿ.ಇ. ಮಿಲೆಟೆಂಟ್ಸ್‌ಗಳನ್ನು ಬಗ್ಗು ಬಡಿಯುವ ಸಲುವಾಗಿ ರಚಿಸಲಾಗುತ್ತಿದೆ. ಇದಲ್ಲದ